
ಗೋಪೀನಾಥ ರಾವ್

# ತೆವಲು



ಮಟಮಟ ಮಧ್ಯಾಹ್ನದ ಸಮಯ. ನಿರ್ಜನವಾಗಿದ್ದ ಹೆದ್ದಾರಿಯಲ್ಲಿ ರುದ್ರಿ ಗೊತ್ತುಗುರಿಯಿಲ್ಲದೆ ಅಲ್ಲಲ್ಲಿ ನಿಲ್ಲುತ್ತ ಮುಂದಕ್ಕೆ ಹೆಜ್ಜೆಯಿಕ್ಕುತ್ತ ಸಾಗುತ್ತಿದ್ದಳು. ಆತ್ಮಹತ್ಯೆಗೆ ಲಾರಿಯ ಚಕ್ರಕ್ಕೆ ತಲೆಯೊಡ್ಡುವುದೆಂದು ದೃಢ ನಿಶ್ಚಯ ಮಾಡಿ ಹೆದ್ದಾರಿಗೆ ಬಂದರೆ ವಾಹನಗಳೇ ಇಲ್ಲದೆ ಹೆದ್ದಾರಿಯೂ ತನ್ನ ಅಸಹಾಯಕತೆ ಒಪ್ಪಿಕೊಂಡಂತೆ ಮೈಚಾಚಿ ಮಲಗಿತ್ತು.

ರುದ್ರಿ ಕಡಿಮೆಯೆಂದರೂ ಹಾಗೆಯೇ ರಸ್ತೆಯಲ್ಲಿ ಐದಾರು ನಿಮಿಷ ನಡೆದಿರಬೇಕು. ದ್ವಿಚಕ್ರ ವಾಹನಗಳು, ಸಣ್ಣ ಕಾರುಗಳು ಶಬ್ದ ಮಾಡದೇ ಚಲಿಸಿದ್ದು ಬಿಟ್ಟರೆ ದೊಡ್ಡ ಲಾರಿಯೋ ಬಸ್ಸೋ ಹಾದು ಹೋಗಿರಲೇ ಇಲ್ಲ. ಬೆಂಕಿಪೆಟ್ಟಿಗೆ ಸೈಜಿನ ವಾಹನಗಳ ಅಡಿಗೆ ಸಿಕ್ಕಿದರೆ ಕೈಕಾಲು ಕಳೆದುಕೊಂಡು ಬದುಕುಳಿಯುವ ಸಾಧ್ಯತೆಯೇ ಜಾಸ್ತಿ. ಅದೆಲ್ಲ ರುದ್ರಿಗೆ ಬೇಕಿರಲಿಲ್ಲ. ಈ ಭೂಮಿ ಮೇಲೆ ಮೈಮಾರಿಕೊಂಡು ಅಥವಾ ಭಿಕ್ಷೆ ಬೇಡಿಕೊಂಡು ಬದುಕಲಾರೆ ಎಂದು ಛಲ ಕಟ್ಟಿದವಳು. ಕಣ್ಣು ಕೈಕಾಲು ಎಲ್ಲ ಸರಿಯಿದ್ದೂ ಬದುಕಲಾಗದವಳು ಅಂಗ ಊನ ಮಾಡಿಕೊಂಡರೆ ಭಿಕ್ಷಾಟನೆ ಹೊರತು ಬದುಕಲು ಸಾಧ್ಯವೇ? ದೊಡ್ಡ ವಾಹನಗಳ ಚಕ್ರದಡಿಯಾದರೆ ಸಾವು ನಿಶ್ಚಿತ. ನೆಮ್ಮದಿಯ ಸಾವು. ರುದ್ರಿಗೆ ಅದೇ ಬೇಕಿತ್ತು.

ತಾನು ಸಾಯುವುದು ಎಂದು ನಿಶ್ಚಯ ಮಾಡಿ ರುದ್ರಿ ಗುಡಿಸಲಿನಿಂದ